Untrained Teachers working in Schools at K. G. F.

736. **Sri S. R. SHANMUGAM** (K.G.F.).—

Will the Minister for Education be pleased to state :—

the number of untrained Primary and Middle School teachers at K.G.F. ?

Sri N. M. KOTRABASAIAH SOGI (Deputy Minister for Education).—

The number of untrained teachers are as follows :—

		S.S.L.C.	*Non-S.S.L..C*	*Total*
Working in Government School	...	62	19	81
In aided schools	...	38	27	65
Total	...	100	46	146

ಶ್ರೀ ಎಸ್. ಆರ್. ಷಣ್ಮುಗಂ.—ಎಷ್ಟು ಜನ ಅನ್‌ಟ್ರೈನ್ಡ್ ಟೀಚರ್ಸ್ ಇದ್ದಾರೆ ಎಂದು ಗೊತ್ತಾಗಬಹುದೋ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದನ್ನು ಉತ್ತರದಲ್ಲಿಯೇ ಕೊಡಲಾಗಿದೆ, ಎಸ್.ಎಸ್.ಎಲ್.ಸಿ. ಆದವರು 100 ಜನ, ಎಸ್.ಎಸ್.ಎಲ್.ಸಿ. ಆಗದವರು 46 ಜನ.

ಶ್ರೀ ಎಸ್. ಆರ್. ಷಣ್ಮುಗಂ.—ಇವರಿಗೆ ಟ್ರೈನಿಂಗ್ ಕೊಡುವುದಕ್ಕೆ ಸರ್ಕಾರ ಏನು ವ್ಯವಸ್ಥೆ ಮಾಡಿದೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅವರಿಗೆ ಈಗಿರುವ ಟ್ರೈನಿಂಗ್ ಕಾಲೇಜುಗಳಲ್ಲಿ ಟ್ರೈನಿಂಗ್ ಕೊಡುವುದಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ. ಆದರೆ ಅಲ್ಲಿ ಕೆಲವು ಜನ ತಮಿಳು ಉಪಾಧ್ಯಾಯರು ಮತ್ತು ತೆಲುಗು ಉಪಾಧ್ಯಾಯರಿದ್ದಾರೆ. ಅವರಿಗೆ ಕೋಲಾರ ಜಿಲ್ಲೆಯಲ್ಲಿ ಅಥವಾ ಸಮೀಪದಲ್ಲಿ ಸಾಯಂಕಾಲದ ವೇಳೆ 'ಇನ್ ಸರ್ವಿಸ್ ಟ್ರೈನಿಂಗ್' ಪದ್ಧತಿಯ ಪ್ರಕಾರ ಟ್ರೈನಿಂಗ್ ಕೊಡಬೇಕು ಎಂದು ಸರ್ಕಾರ ವಿಚಾರ ಮಾಡುತ್ತಿದೆ.

ಶ್ರೀ ಇ. ನಾರಾಯಣಗೌಡ.—ಏಪೆಡ್ ಇನ್‌ಸ್ಟಿಟ್ಯೂಷನ್‌ನಲ್ಲಿ ಹತ್ತಾರು ವರ್ಷವಾದರೂ ಟ್ರೈನಿಂಗ್ ಕೊಡತಕ್ಕ ಏರ್ಪಾಡು ಮಾಡುವುದಿಲ್ಲ. ನಿರ್ದಿಷ್ಟವಾದ ಅವಧಿಯೊಳಗೆ ಟ್ರೈನಿಂಗ್ ಕೊಡಬೇಕು ಎಂದು ಏನಾದರೂ ನಿರ್ಬಂಧವನ್ನು ಹಾಕಲಾಗುವುದೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನುಮಾರು 1964ನೇ ಇಸವಿಗೆ ಮುಂಚೆ ನೇಮಕವಾದವರಿಗೆ ಟ್ರೇನಿಂಗ್ ಕೊಡಬೇಕಾಗಿದೆ. ಈಗ ಟ್ರೇನಿಂಗ್ ಕೊಡುವಾಗ ಸೀನಿಯಾರ್ಟಿ ಮೇರೆ ಪ್ರತಿಯೊಬ್ಬರಿಗೂ ಪ್ರತಿವರ್ಷವೂ ಟ್ರೇನಿಂಗ್ ಇನ್‌ಸ್ಟಿಟ್ಯೂಷನ್‌ಗಳಿಗೆ ಕಳಿಸಿ ಎಲ್ಲ ಉಪಾಧ್ಯಾಯರುಗಳಿಗೂ ಟ್ರೇನಿಂಗ್ ಕೊಡತಕ್ಕ ವ್ಯವಸ್ಥೆ ಮಾಡಲಾಗುತ್ತಿದೆ.

ಶ್ರೀ ಎನ್. ಚಿಕ್ಕೇಗೌಡ.—ಅನೇಕ ಅನ್‌ಟ್ರೇನ್ಡ್ ಟೀಚರ್ಸ್ ಟ್ರೇನಿಂಗಿಗೆ ಹಾಕಿದಾಗ ಹೋಗದೆ ಎರಡು ಮೂರು ಸಾರಿಯಾದರೂ ತಪ್ಪಿಸಿಕೊಳ್ಳುತ್ತಾರೆ. ಅಂಥವರ ಮೇಲೆ ಏನು ಕ್ರಮ ತೆಗೆದು ಕೊಂಡಿದ್ದೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಟ್ರೇನಿಂಗಿಗೆ ಡೆಪ್ಯೂಟ್ ಮಾಡಿದಾಗ ಹೋಗದೆ ಇರುವವರ ಇನ್‌ಕ್ರಿಮೆಂಟ್ ನಿಲ್ಲಿಸಿದ್ದೇವೆ. ಇಂಥವರ ಮೇಲೆ ಇನ್ನೂ ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು, ಸಸ್‌ಪೆನ್‌ಷನ್‌ನಲ್ಲಿ ಇಡಬೇಕು ಎಂದು ಸರ್ಕಾರ ವಿಚಾರ ಮಾಡುತ್ತಿದೆ. ಈಗ ಸದ್ಯಕ್ಕೆ ಅಂಥವರ ಇನ್‌ಕ್ರಿಮೆಂಟ್ ನಿಲ್ಲಿಸಲಾಗುತ್ತಿದೆ.

ಶ್ರೀ ಎನ್. ಎ. ಚನ್ನೇಗೌಡ.—46 ಜನ ಎಸ್.ಎಸ್.ಎಲ್.ಸಿ. ಆಗದೆ ಇರುವವರಲ್ಲಿ ಅನ್‌ಟ್ರೇನ್ಡ್ ಟೀಚರ್ಸ್ ಇದ್ದಾರೆ ಎಂದು ಹೇಳಲಾಗಿದೆ. ಎಸ್.ಎಸ್.ಎಲ್.ಸಿ. ಆಗಿರುವವರು ಸಿಕ್ಕದೆ ಇರುವುದರಿಂದ ಇಂಥವರನ್ನು ನೇಮಿಸಿದ್ದೀರಾ? ಅವರು ಹಿಂದಿನಿಂದಲೂ ಇದ್ದರೆ ಅವರಿಗೆ ಏಕೆ ಟ್ರೇನಿಂಗ್ ಕೊಟ್ಟಿಲ್ಲ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅವರು ಬಹಳ ಹಿಂದೆ ನೇಮಕವಾದವರು. ಆಗಿನ ಕಾಲದಲ್ಲಿ ಎಸ್.ಎಸ್.ಎಲ್.ಸಿ. ಆಗಿರಬೇಕೆಂಬ ಕಡ್ಡಾಯವಿರಲಿಲ್ಲ. ಎಸ್.ಎಸ್.ಎಲ್.ಸಿ. ಆಗದೆ ಇರುವವರನ್ನೂ ನೇಮಕ ಮಾಡುವುದಕ್ಕೆ ಅವಕಾಶವಿತ್ತು. ಆ ಪ್ರಕಾರ ನೇಮಕವಾದವರು.

ಶ್ರೀ ಎ. ಆರ್. ಬದರಿನಾರಾಯಣ್.—ಪ್ರೈಮರಿ ಮತ್ತು ಮಿಡಲ್ ಸ್ಕೂಲುಗಳಲ್ಲಿ ಟ್ರೇನ್ಡ್ ಟೀಚರ್ಸ್ ಎಷ್ಟು ಜನ ಬೇಕಾಗುತ್ತಾರೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಅದನ್ನು ಪೂರೈಕೆ ಗೊಳಿಸುವುದಕ್ಕೋಸ್ಕರ ಏನು ವ್ಯವಸ್ಥೆ ಮಾಡಿದ್ದೀರಿ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನಮ್ಮ ರಾಜ್ಯದಲ್ಲಿ 75 ಟ್ರೇನಿಂಗ್ ಇನ್‌ಸ್ಟಿಟ್ಯೂಷನ್‌ಗಳಿವೆ. ಎಲ್ಲಕಡೆಯೂ ಎಲ್ಲರಿಗೂ ಟ್ರೇನಿಂಗ್ ಕೊಡರಾಗುತ್ತಿದೆ. ಪ್ರತಿ ವರ್ಷ ಅವರವರ ಸೀನಿಯಾರಿಟಿಗೆ ತಕ್ಕಂತೆ ಇರತಕ್ಕ ವೇಕೆನ್ಸಿಗಳನ್ನು ನೋಡಿಕೊಂಡು, ಟ್ರೇನಿಂಗ್ ಸಂಸ್ಥೆಗಳ ಕೆಪಾಸಿಟಿ ನೋಡಿ ಟ್ರೇನಿಂಗ್ ಕೊಡಲಾಗುತ್ತಿದೆ.

Construction of Government Primary School Building at Pavagada

761. **Sri P. ANJANAPPA** (Pavagada).—

Will the Minister for Education be pleased to state :—

(*a*) the stage at which the construction of Government Primary School building at Pavagada stands ;

(*b*) whether the building is not yet taken up for execution ?

Sri N. M. KOTRABASIAH SOGI (Deputy Minister for Education).—

(*a*) The plan and estimate have been approved and sent to Executive Engineer, Madhugiri division for taking further needful action ?

(*b*) The work could not be taken during the current year due to paucity of funds. It will be taken up during the next year.

ಶ್ರೀ ಪಿ. ಅಂಜನಪ್ಪ.—(ಅ) ಭಾಗಕ್ಕೆ ಕೊಟ್ಟಿರುವ ಉತ್ತರಕ್ಕೆ ಸಂಬಂಧಪಟ್ಟಂತೆ ಕೇಳುತ್ತ ಇದ್ದೇನೆ. ಈ ಪ್ರಾಥಮಿಕ ಶಾಲೆಗೆ ಎಷ್ಟು ವರ್ಷದಿಂದ ಬಾಡಿಗೆ ಕೊಡುತ್ತಿದ್ದೀರಿ ಮತ್ತು ಎಷ್ಟು ದುಡ್ಡು ಕೊಡಲಾಗಿದೆ ಎಂದು ತಿಳಿಸುತ್ತೀರಾ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಬಾಡಿಗೆ ಕೊಟ್ಟಿರುವ ವಿಷಯದ ಬಗ್ಗೆ ಮಾಹಿತಿ ಇಲ್ಲ. ಶಾಲಾ ಕಟ್ಟಡವನ್ನು ಕಟ್ಟಿಸಬೇಕು ಎನ್ನುವ ಬಗ್ಗೆ ಪ್ಲಾನ್ ಮತ್ತು ಎಸ್ಟಿಮೇಟುಗಳು ತಯಾರಾಗಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರಿಂದ ಅಪ್ರೂವಾಗಿ, ಕೆಲಸ ಈಗಾಗಲೇ ಪ್ರಾರಂಭವಾಗಿದೆ.

ಶ್ರೀ ಪಿ. ಅಂಜನಪ್ಪ.—(ಅ) ಪ್ರಶ್ನೆಗೆ ಉತ್ತರವಾಗಿ "ಮುಂದಿನ ಸಾಲಿನಲ್ಲಿ ಸದರಿ ಕಾಮಗಾರಿಯನ್ನು ಕೈಕೊಳ್ಳಲಾಗುವುದು." ಎಂದು ಹೇಳಿರುವುದರಲ್ಲಿ ಎಷ್ಟುಮಟ್ಟಿಗೆ ಸತ್ಯಾಂಶವಿದೆ!

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗ ಕೊಟ್ಟಿರುವ ಉತ್ತರ ಸತ್ಯವಾದದ್ದು.